ದಿನಾಂಕ : 18.09.2025 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಪಾಟೀ ಸವಾಲುಃ** ಅರ್ಜಿದಾರರ ಪರ **ವಕೀಲರಿಂದ,**

ಕೆ.ಎಲ್.08 ಬಿಕ್ಯೂ.9201 ಈ ವಾಹನಕ್ಕೆ ಅಪಘಾತದ ದಿನ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಈ ಅಪಘಾತದ ಬಗ್ಗೆ ನಮ್ಮ ಕಂಪನಿಯವರು ಪ್ರತ್ಯೇಕವಾಗಿ ತನಿಖೆಯನ್ನು ಮಾಡಿಸಿರುತ್ತಾರೆ. ಆ ತನಿಖಾ ವರದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಈ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿಯು ಆಟೋ ಚಾಲಕನ ತಪ್ಪು ಕೂಡ ಇತ್ತು ಎಂದು ನುಡಿಯುತ್ತಾರೆ. ಪೊಲೀಸರು ಲಾರಿ ಚಾಲಕನ ಮೇಲೆ ಅಷ್ಟೇ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥನು ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಪಿ ಸಿವಿಲ್ ಜಡ್ಜ್, ಬಳ್ಳಾರಿ**